ವಸತಿ ಯೋಜನೆಯ ಅಕ್ರಮ ಹಂಚಿಕೆ

2516(2820); ಶ್ರೀ ಮಂಜು ಎ.

ಅ) ಕೇಂದ್ರ ಸರ್ಕಾರವು ಕೇಂದ್ರ ವಸತಿ ಯೋಜನೆಯ ಅಡಿಯಲ್ಲಿ ಹೊಳೇನರಸಿಪುರದ ಕೊಳಚೆ ಪ್ರದೇಶದ ನಿವಾಸಿಗಳಿಗಾಗಿ ಸುಮಾರು ಒಂದು ಸಾವಿರ ಮನೆಗಳನ್ನು, ಮಂಜೂರು ಮಾಡಿ ಮನೆ ನಿರ್ಮಾಣದ ಹೊಣೆಯನ್ನು ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಗೆ ವಹಿಸಿದ್ದು, ಈ ಮನೆಗಳು ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಮನೆಯನ್ನು ಯಾವ ವಿಧಾನದಲ್ಲಿ ಹಂಚಿಕೆ ಮಾಡಲಾಗಿದೆ;

ಇ) ಇದರ ಫಲಾನುಭವಿಗಳನ್ನು ಯಾವ ಮಾನದಂಡದ ಆಧಾರದಲ್ಲಿ ಆಯ್ಕೆ ಮಾಡಲಾಗಿದೆ;

ಈ) ಸದರಿ ಮನೆಗಳನ್ನು ಹಂಚಿಕೆ ಮಾಡುವಾಗ ಮನಸೋ ಇಚ್ಛೆ ಹಂಚಿಕೆ ಮಾಡಿ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕೊಳಚೆ ಪ್ರದೇಶಕ್ಕೆ ಸೀಮಿತವಾದ ಮನೆಗಳು ಪೇಟೆ ಬೀದಿಯಲ್ಲೂ ನಿರ್ಮಾಣವಾಗಿದ್ದು, ಇದಕ್ಕೆ ಸಂಬಂಧಪಟ್ಟ ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಬಡವರ್ಗದ ಜನರಿಗೆ ಅನ್ಯಾಯವಾಗಿರುವುದರ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದೇ?

ಡಾ॥ ಎಂ.ಹೆಚ್. ಅಂಬರೀಷ್ (ಮಾನ್ಯ ವಸತಿ ಸಚಿವರು)

ಅ) ಕೇಂದ್ರ ಸರ್ಕಾರದ ನರ್ಮ್–ಐ.ಹೆ.ಎಸ್.ಡಿ.ಪಿ. ಯೋಜನೆಯಡಿ ಹೊಳೇನರಸಿಪುರ ಪಟ್ಟಣದ 13 ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಲಭ್ಯಗಳೊಂದಿಗೆ 1000 ಮನೆಗಳನ್ನು ರೂ. 18.40 ಕೋಟಿ ನಿರ್ಮಿಸಲು 2008–09ನೇ ಸಾಲಿನಲ್ಲಿ ಮಂಜೂರಾತಿ

ನೀಡಿದ್ದು, ಸದರಿ ಮನೆಗಳನ್ನು ಮಂಡಳಿಯಿಂದ ಪೂರ್ವಾಹತೆ ಹೊಂದಿದ ಗುತ್ತಿಗೆದಾರರಿಂದ ನಿರ್ಮಾಣ ಮಾಡಲಾಗಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕೊಳಚೆ ಪ್ರದೇಶದ ಹೆಸರುಗಳು ಕೆಳಕಂಡಂತಿದೆ.

ಕ್ರ.ಸಂ.	ಕೊಳಚೆ ಪ್ರದೇಶದ ಹೆಸರು	ಮನೆಗಳ ಸಂಖ್ಯೆ
1	ಶಿಯಾ ಮೊಹಲ್ಲಾ– 1ನೇ ಹಂತ	60
2	ಶಿಯಾ ಮೊಹಲ್ಲಾ– 2ನೇ ಹಂತ	80
3	ಕೊರಮರ ಬೀದಿ	70
4	ಕೋಟೆ ಮಡಿವಾಳರ ಬೀದಿ	120
5	ಕ್ಕಿಕ್ಕೇರಮ್ಮನ ಕೊಪ್ಪಲು	130
6	ಮೇದರ್ಸ್ ಕಾಲೋನಿ	50
7	ಪೇಟೆ ಮಡಿವಾಳರ ಬೀದಿ	200
8	ಗಾಂಧಿನಗರ	70
9	ಸ್ವೀಪರಸ್ ಕಾಲೋನಿ	10
10	ಪೂಜಾ ಕೊಪ್ಪಲು	50
11	ಹಯಾತ್ ನಗರ	60
12	ಏ.ಡಿ.ಕಾಲೋನಿ	50
13	ಜಾಮೀಯಾ ಮಸೀದಿ ಹತ್ತಿರ	50
ಒಟ್ಟು		**1000**

ಆ) ಮಂಡಳಿಯ ಕಾಯಿದೆ ಪ್ರಕಾರ ಘೋಷಿತ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಕೊಳಚೆ ಪ್ರದೇಶದ ನಿವಾಸಿಗಳಿಗೆ ಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳ ಹಂಚಿಕೆಗೆ ಮಂಡಳಿಯ ಕಾಯ್ದೆ ಹಾಗೂ ಮಂಡಳಿ ಸಭೆಯ

ನಿರ್ಣಯದಂತೆ ಈ ಕೆಳಗಿನ ಮಾನದಂಡಗಳನ್ನು ಅನುಸರಿಸಲಾಗುವುದು.

1) ನಿವಾಸಿಯು ಘೋಷಿತ ಕೊಳಚೆ ಪ್ರದೇಶದ ನಿವಾಸಿಯಾಗಿದ್ದು, ಕಳೆದ 10 ವರ್ಷಗಳು ಸದರಿ ಕೊಳಚೆ ಪ್ರದೇಶದಲ್ಲಿ ವಾಸವಾಗಿರಬೇಕು.

2) ಘೋಷಿತ ಕೊಳಚೆ ಪ್ರದೇಶದಲ್ಲಿ ಮಂಡಳಿ ನಡೆಸಿದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಪಟ್ಟಿಯಲ್ಲಿರಬೇಕು.

3) ಘೋಷಿತ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವುದಕ್ಕೆ ಮತದಾರರ ಗುರುತು ಪತ್ರ ಹಾಗೂ ಆಹಾರ ಪಡಿತರ ಚೀಟಿ ಹೊಂದಿರಬೇಕು.

4) ಮಂಡಳಿವತಿಯಿಂದ ವಿತರಿಸಲಾದ ಗುರುತು ಪತ್ರ ಹೊಂದಿರಬೇಕು.

5) ನಿವಾಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು.

6) ಅಂಗವಿಕಲರಿಗೆ ಸಂಬಂಧಪಟ್ಟ ಇಲಾಖೆಯಿಂದ ನೀಡಿರುವ ಪ್ರಮಾಣ ಪತ್ರ ಹೊಂದಿರಬೇಕು.

7) ನಿವಾಸಿಯು ಯಾವುದೇ ಮನೆ/ನಿವೇಶನ ಹೊಂದಿಲ್ಲದ ಬಗ್ಗೆ ಪ್ರಮಾಣ ಪತ್ರ ನೀಡತಕ್ಕದ್ದು.

8) ಕೇಂದ್ರ/ರಾಜ್ಯ ಸರ್ಕಾರ ನಿಗಧಿಪಡಿಸಿರುವ ಫಲಾನುಭವಿಗಳ ವಂತಿಕೆಯನ್ನು ಪಾವತಿಸತಕ್ಕದ್ದು.

ಈ ಬಗ್ಗೆ ಸರ್ಕಾರ ಆದೇಶ ಸಂಖ್ಯೆ:ವ.ಇ.115 ಕೊಮಂಲೆ 2013 (1) ಬೆಂಗಳೂರು 4–2–2014 ರಲ್ಲಿ ಸಮಾಜಿಕ–ಆರ್ಥಿಕ ಸಮೀಕ್ಷೆ ಸಮಿತಿ ಹಾಗೂ ಸರ್ಕಾರ ಆದೇಶ ಸಂಖ್ಯೆ ವ.ಇ.115 ಕೊಮಂಲೆ 2013 (2) ಬೆಂಗಳೂರು 4–2–2014 ರಲ್ಲಿ ಹಂಚಿಕಾತಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯಲ್ಲಿ ಫಲಾನುಭವಿಗಳ ಪಟ್ಟಿಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು.

ಈ) ಸದರಿ ಮನೆಗಳನ್ನು ಅರ್ಹ ಕೊಳಚೆ ಪ್ರದೇಶದ ನಿವಾಸಿಗಳಿಗೆ ಹಂಚಿಕೆ ಮಾಡಲಾಗಿದ್ದು, ಅನ್ಯಾಯವಾಗಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

ಉ) ಈ ಬಗ್ಗೆ ಕೊಳಚೆ ಪ್ರದೇಶದ ನಿವಾಸಿಗಳಿಂದ ಅನ್ಯಾಯವಾಗಿರುವ ಬಗ್ಗೆ ದೂರುಗಳು ಬಂದಲ್ಲಿ ಸಮಗ್ರವಾಗಿ ಪರಿಶೀಲಿಸಲು ಕ್ರಮ ಕೈಗೊಳ್ಳಲಾಗುವುದು.

ಅಂಗನವಾಡಿ ಕಟ್ಟಡ ನಿರ್ಮಾಣ

2518(2806); ಶ್ರೀ ಮಂಜುನಾಥ ಜಿ.

ಅ) ಮುಳಬಾಗಿಲು ತಾಲ್ಲೂಕಿನಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಮುಖ್ಯ ಕೇಂದ್ರ ಹಾಗೂ ಮೈಕ್ರೋ ಕೇಂದ್ರಗಳ ಮಾಹಿತಿ ನೀಡುವುದು;

ಆ) ಸರ್ಕಾರಿ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು (ವಿವರ ನೀಡುವುದು);

ಇ) ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಲಭ್ಯವಿರುವ ಕೇಂದ್ರಗಳ ಸಂಖ್ಯೆ ಎಷ್ಟು; ಸ್ಥಳ ಲಭ್ಯವಿದ್ದಲ್ಲಿ ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ವಿವರ ನೀಡುವುದು)?